<u>ಅಸಲು ದಾವಾ:-</u> 204/2017 ಪಿ.ಡಬ್ಲ್ಯೂ:- 2

ದಿನಾಂಕ: 15.07.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ.ಎಂ ಜೆ ವಕೀಲರಿಂದ</u>

ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಮನೆ ಕಟ್ಟುತ್ತಿದ್ದ ಸಮಯದಲ್ಲಿ ಅವರಿಗೆ ನೋಟೀಸ್ ನೀಡಿದ್ದೀರಾ ಎಂದರೆ ಸಾಕ್ಷಿಯು ಪಂಚಾಯತಿಯವರಿಗೆ ಅರ್ಜಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ನಿರ್ಮಿಸಿರುವ ಮನೆಯಲ್ಲಿ ಪ್ರತಿವಾದಿಗಳು ವಾಸವಿದ್ದಾರೆ ಎಂದರೆ ಸರಿ. ಪ್ರತಿವಾದಿಗಳು ಮನೆ ಕಟ್ಟಿರುವ ಜಾಗ ಪ್ರತಿವಾದಿಗಳಿಗೆ ಸೇರಿದ್ದು ಎಂದರೆ ಸರಿಯಲ್ಲ. ನಾವು ಆಸ್ತಿ ಖರೀದಿ ಮಾಡಿರುವ ಸಮಯದಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಯಾರು ಆಗಿದ್ದರು ಎಂದರೆ ಹೆಸರು ಗೊತ್ತಿಲ್ಲ. ಪ್ರತಿವಾದಿಗಳ ಮನೆಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ